ಶ್ರೀ ಬಿ. ಪುಟ್ಟಸ್ವಾಮಿ :—ಸುಮಾರು 25 ವರ್ಷಗಳಿಂದ, ಹರಿಜನರು, ಜಮೀನು ಇಲ್ಲದ ಬಡವರು, ಈ ಜಮೀನನ್ನು ಫಾರೆಸ್ಟ್ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ಬಿಟ್ಟುಕೊಡಬೇಕು ಎಂದು ಕೇಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಕೇಳುತ್ತಿದ್ದರು, ಅದನ್ನು ಬಿಟ್ಟು ಕೊಟ್ಟು ಆರ್ಡರ್ ಕೂಡ ಆಗಿದೆ.

ಶ್ರೀ ಬಿ. ಪುಟ್ಟಸ್ವಾಮಿ :—ಕಾಫಿ ಸಾಗುವಳಿಗೆ ಜಮೀನನ್ನು ಬೇರೆಯವರ ಹೆಸರಿನಲ್ಲಿ —ಮಂಜೂರು. ಮಾಡಿಸಿಕೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇಲ್ಲ. ನನ್ನಲ್ಲಿರುವ ಅಂಕಿಅಂಶಗಳು ಪ್ರಕಾರ ಬದರೆ ಗ್ರಾಮದ ಸರ್ವೆ ನಂಬರು 283 ರಲ್ಲಿ 200 ಎಕರೆ ಬಿಡುಗಡೆಮಾಡ ಲಾಗಿದ್ದು ಆ ಪೈಕಿ ಇಬ್ಬರಿಗೆ ಕಾಫಿ ಬೆಳೆಗಾಗಿ ಅರ್ಜಿ ಹಾಕಿದ್ದವರಿಗೆ 25 ಎಕರೆ ಯಂತೆ ಮಂಜೂರುಮಾಡಿದೆ. ಇದರೆ ಪೈಕಿ ಒಬ್ಬರಿಗೆ ಜಮೀನಿರಲಿಲ್ಲ, ಇನ್ನೊಬ್ಬರಿಗೆ 74 ಎಕರೆ 38 ಗುಂಟೆ ಇತ್ತು. ಕಾಫಿ ವ್ಯವಸಾಯಕ್ಕೆ 25 ಎಕರೆಯ ವರೆಗೆ ಕೊಡಬೇಕೆಂದಿದ್ದುದರಿಂದ ಆದರಂತೆ ಇಬ್ಬರಿಗೆ ಕೊಡಲಾಗಿದೆ. ಇಬ್ಬರಿಗೆ 50 ಎಕರೆ ಕೊಟ್ಟಮೇಲೆ ಅಲ್ಲಿ ಬಹಳ ಉತ್ತಮವಾದ ಮರಗಳಿದ್ದುದರಿಂದ ಕೊಡುವು ದನ್ನು ಅಲ್ಲಿಗೇ ನಿಲ್ಲಿಸಿ ಉಳಿದಿರುದನ್ನು ಕೊಡಬಾರದು ಎಂದು ನಿರ್ಧರಿಸಿ ಉಳಿದುದನ್ನು ಅರಣ್ಯ ಇಲಾಖೆಗೆ ಕೊಡಲು ಆರ್ಡರ್ ಮಾಡಲಾಗಿದೆ.

DEVELOPMENT OF BELEKERI-HARWAD FISHERIES ROAD

56 SMT. RADHA BHATT (Ankola).—

Will the Minister of State for fisheries be pleased to state :—

when the work of Belekeri-Harwad fisheries development road would be started ?

SRI K. T. RATHOD (Minister of State for Fisheries).—

The matter of taking up the work relating to Belekeri-Harwad Fisheries Development road is under the consideration of the Central Government.

ಶ್ರೀ ರಾಧಾಭಟ್ :—ಬೆಲಿಕೇರಿ ಹಾರವಾಡ ಮೀನುಗಾರಿಕೆ ರಸ್ತೆ ಅಭಿವೃದ್ಧಿಗೊಳಿಸುವ ವಿಷಯ ಕೇಂದ್ರ ಸರಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಆದರೆ ಕಳೆದ ಅಧಿವೇಶನದಲ್ಲಿ ನನ್ನ ಪ್ರಶ್ನೆಗೆ ಲೋಕೋಪಯೋಗಿ ಸಚಿವರು ಈ ರಸ್ತೆಗೆ ಮೆಟಲ ಮಾಡಲು ಉದ್ದೇಶಿಸಲಾಗಿದೆ, ಆದಷ್ಟು ಬೇಗ ಇದರ ಬಗ್ಗೆ ಕ್ರಮ ಕೈಕೊಳ್ಳಲಾಗುವುದು ಎಂದು ಹೇಳಿದ್ದರು. ಆದರೆ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈಗಲಾದರೂ ಈ ಬಗ್ಗೆ ಮನಸ್ಸುಮಾಡಿ ಮೀನುಗಾರಿಕೆಯ ಅಭಿವೃದ್ಧಿಯ ಸಲುವಾಗಿ ರಾಜ್ಯ ಸರಕಾರ ಈ ರಸ್ತೆ ಕೆಲಸವನ್ನು ಕೈಕೊಳ್ಳುವುದೇ ?

ಶ್ರೀ ಕೆ. ಟಿ. ರಾಥೋಡ :—ಇದು ಸೆಂಟ್ರಲ್ ಸ್ಕೀಮಿನ ಕೆಳಗೆಬರುವ ಕೆಲಸ. ಈ ಬಗ್ಗೆ ಅಂದಾಜು ಮಾಡಿ ಕೇಂದ್ರ ಸರಕಾರಕ್ಕೆ ಮಂಜೂರಾತಿಗೆ ಕಳಿಸಿದೆ. 1971 ರಿಂದಲೇ ಈ ಕೆಲಸದ ಮಂಜೂರಾತಿಗೆ ಬರೆಯಲಾಗಿದೆ. ದಿನಾಂಕ 31_7_1973 ರಂದು ಕೇಂದ್ರ ಸರಕಾರಕ್ಕೆ ಒಂದು ಡಿಓ ಪತ್ರ ಬರೆದು ತಕ್ಷಣ ಇದನ್ನು ಮಂಜೂರು ಮಾಡಬೇಕೆಂದು ಕೇಳಲಾಗಿದೆ. ಈ ವರ್ಷ ಇದಕ್ಕೆ ಮಂಜೂರಾತಿ ದೊರೆತು ಈ ಕೆಲಸ ತೆಗೆದುಕೊಳ್ಳಬಹುದೆಂದು ಆಶಿಸಲಾಗಿದೆ.

ಶ್ರೀಮತಿ ರಾಧಾಭಟ್:—ಇದು ಬಹಳ ಆವಶ್ಯಕವಾದ ರಸ್ತೆ ಮೀನುಗಾರರು ಬಹಳ ಕಷ್ಟಪಡುತ್ತಿದ್ದಾರೆ. ಆದುದರಿಂದ ಆದಷ್ಟು ಬೇಗ ಇದರ ಕೆಲಸ ಕೈಗೊಳ್ಳಲು ಮಂತ್ರಿಗಳು ಮನಸ್ಸುಮಾಡುವರೇ ?

ಶ್ರೀ ಕೆ. ಟಿ. ರಾಥೋಡ :—ಈ ಕೆಲಸ ತೀವ್ರವಾಗಿ ಮಾಡಬೇಕೆಂಬ ಇಚ್ಛೆ ಸರಕಾರಕ್ಕೂ ಇದೆ. ಆದರೆ ಕೇಂದ್ರ ಸರಕಾರದಿಂದ ಮಂಜೂರಾಗುವವರೆಗೆ ಕಾಯಬೇಕಾಗಿದೆ. ಅದರಿಂದ ವಿಳಂಬವಾಗಿದೆ. ಆದಷ್ಟು ಜಾಗ್ರತೆ ಮಂಜೂರಾತಿ ಪಡೆಯಲು ಪ್ರಯತ್ನಮಾಡುತ್ತೇವೆ.

MYSORE ACETATE AND CHEMICALS CO., LTD.

128 SRI KAGDOU THIMMAPPA (Sagar).—

Will the Minister for Industries be pleased to state:—

(*a*) the capital invested in the Mysore Acetate and Chemicals Co. Ltd. and the share of the State Government in it ;

(*b*) the profit and loss account of the Company from its inception up to-date (yearwise) ;